**<u>ಕರ್ನಾಟಕ ವಿಧಾನಪರಿಷತ್ತು</u>**

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | | 682(626) |
| ಮಾನ್ಯ ಸದಸ್ಯರ ಹೆಸರು | | ಶ್ರೀ ಡಾ: ತಳವಾರ್ ಸಾಬಣ್ಣ<br>(ನಾಮನಿರ್ದೇಶನ ಹೊಂದಿದವರು |
| ಉತ್ತರಿಸುವ ಸಚಿವರು | | ಉನ್ನತ ಶಿಕ್ಷಣ ಸಚಿವರು |
| ಉತ್ತರಿಸಬೇಕಾದ ದಿನಾಂಕ | | 18.08.2025 |
| ಪ್ರಶ್ನೆ | | ಉತ್ತರ |
| ಅ) | ಸರ್ಕಾರವು ಕಲಬುರಗಿ ಜಿಲ್ಲೆ ಸೇಡಂ ತಾಲ್ಲೂಕಿನ ಮಳಖೇಡ ಗ್ರಾಮದಲ್ಲಿ ಸರ್ವೆ ನಂ.2/1 ಬಿ ರಲ್ಲಿ 23.30 ಎಕರೆ ಜಮೀನಿನಲ್ಲಿ ಅತಿಕ್ರಮಣ ತಡೆಯಲು ತಡೆಗೋಡೆ ನಿರ್ಮಾಣ ಕಾಮಗಾರಿಗೆ ಅಡ್ಡಿಪಡಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಗುಲಬರ್ಗಾ ವಿಶ್ವವಿದ್ಯಾಲಯವು ಹಾಗೂ ಅಮೇರಿಕಾದ ಕೊಲೆರಾಡೋ ಸ್ಟೇಟ್ ವಿಶ್ವವಿದ್ಯಾಲಯ ಇವುಗಳ ಸಹಭಾಗಿತ್ವದಲ್ಲಿ ಯು.ಜಿ.ಸಿ.ಯಿಂದ ಆರ್ಥಿಕ ಸಹಾಯ ಪಡೆದು ಆಹಾರ, ಶಕ್ತಿ ಮತ್ತು ಜಲಸಂರಕ್ಷಣೆಯ ಮೂರು ಘಟಕಗಳನ್ನು ಸ್ಥಾಪಿಸುವ ಸಲುವಾಗಿ 1966ರ ಕಲಂ 71ರ ಮೇರೆಗೆ ಗುಲಬರ್ಗಾ ಜಿಲ್ಲೆ, ಸೇಡಂ ತಾಲ್ಲೂಕಿನ ಮಳಖೇಡ (ಜೆ) ಗ್ರಾಮದ ಸ.ನಂ.2/1ರಲ್ಲಿನ 23-30 ಎಕರೆ ವಿಸ್ತೀರ್ಣದ ಜಮೀನನ್ನು ಗುಲ್ಬರ್ಗಾ ವಿಶ್ವವಿದ್ಯಾಲಯಕ್ಕೆ ಮುಫತ್ತಾಗಿ ಹಸ್ತಾಂತರಿಸಲು ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 19 ಎಲ್‌ಜಿಜಿ 2012, ದಿನಾಂಕ:20.11.2012ರಲ್ಲಿ ಮಂಜೂರಾತಿ ನೀಡಿ ಆದೇಶಿಸಿದೆ.<br><br>ಈ ಆದೇಶದನ್ವಯ ಸಹಾಯಕ ಆಯುಕ್ತರು ಸೇಡಂ ಇವರು ಕಛೇರಿ ಆದೇಶ ಸಂಖ್ಯೆ:ಕಂ/ಭೂಮಿ/92/11-12/2198, ದಿನಾಂಕ: 21.11.2012 ರಲ್ಲಿ ಸದರಿ ಜಮೀನನ್ನು ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ ಹಸ್ತಾಂತರಿಸಿ ಆದೇಶಿಸಿರುತ್ತಾರೆ.<br><br>ಈ ಆದೇಶದನ್ವಯ ಗುಲಬರ್ಗಾ ವಿಶ್ವವಿದ್ಯಾಲಯವು ಜಮೀನಿನ ಬೌಂಡರಿಯನ್ನು ಸರ್ವೆ ಮಾಡುವ ಸಂದರ್ಭದಲ್ಲಿ ಅಲ್ಲಿನ ಸ್ಥಳೀಯ ವ್ಯಕ್ತಿಯೊಬ್ಬರಾದ ಶ್ರೀ ಯೂಸುಫ್ ಖಾನ್ ತಂದೆ ಜಾನ್ ಮೊಹಮದ್ದ ಖಾನ್ ಮಳಖೇಡ ಎಂಬುವವರು ಸರ್ಕಾರದಿಂದ ನೀಡಿರುವ ಸರ್ವೆ ನಂಬರ್ 2/1ರಲ್ಲಿನ 23-30 ಎಕರೆ ವಿಸ್ತೀರ್ಣದಲ್ಲಿ ಮೂರು ಎಕರೆ ಜಮೀನು ತಮ್ಮದೆಂದು ಸರ್ವೆ ಮಾಡಿಸುವ ಕಾರ್ಯಕ್ಕೆ ಅಡ್ಡಿಪಡಿಸಿರುತ್ತಾರೆ. ಆದ್ದರಿಂದ, ವಿಶ್ವವಿದ್ಯಾಲಯವು ಈ ಜಮೀನಿಗೆ ಸಂಬಂಧಿಸಿದಂತೆ ಪುನ: ಸರ್ವೆ ಕಾರ್ಯವನ್ನು ಮಾಡಿಸಿದ್ದು, ಸದರಿ ಜಮೀನಿನಲ್ಲಿ ಶ್ರೀ ಯೂಸಫ್ ಖಾನ್ ತಂದೆ ಜಾನ್ ಮೊಹಮದ |
| ಆ) | ಸದರಿ ಜಮೀನು ಗುಲ್ಬರ್ಗಾ ವಿಶ್ವವಿದ್ಯಾಲಯಕ್ಕೆ ನೀಡಿದ್ದು, ಅಲ್ಲಿ ಅಂತರ್‌ರಾಷ್ಟ್ರೀಯ ಆಹಾರ, ಶಕ್ತಿ ಮತ್ತು ಜಲ ಸಂರಕ್ಷಣೆ ಸಂಸ್ಥೆ ಸ್ಥಾಪಿಸಲು ಟೆಂಡರ್ ಕರೆದಿದ್ದರೂ ಸ್ಥಳೀಯ ವ್ಯಕ್ತಿಯೊಬ್ಬರು ಆ ಕಾಮಗಾರಿಗೆ ತೊಂದರೆ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯ: | |
| ಇ) | ಸ್ಥಳೀಯ ವ್ಯಕ್ತಿ ಪಹಣಿ ದಾಖಲೆಯಲ್ಲಿ ಹೆಸರಿಲ್ಲದಿದ್ದರೂ 3 ಎಕರೆ ಜಾಗ ನನ್ನದು ಎಂದು ತಡೆಗೋಡೆ ನಿರ್ಮಾಣಕ್ಕೆ ಅಡ್ಡಿಪಡಿಸುತ್ತಿರುವುದನ್ನು ತಡೆದು ಸಂಸ್ಥೆ ಸ್ಥಾಪಿಸಲು ಸರ್ಕಾರ ಅನುವು ಮಾಡಿಕೊಡುವುದೇ: | |
| ಈ) | ಗುಲ್ಬರ್ಗಾ ವಿಶ್ವವಿದ್ಯಾಲಯ ಸಂಶೋಧನೆ ಮತ್ತು ಸಾರ್ವಜನಿಕ ಉಪಯೋಗಕ್ಕೆ ಸಂಸ್ಥೆಯನ್ನು ಸ್ಥಾಪಿಸಲು ಸರ್ಕಾರ ನೀಡಿದ ಜಮೀನನ್ನು ತನ್ನದೆಂದು ಎಲ್ಲಾ ಕಾಮಗಾರಿಗಳನ್ನು ತಡೆದವರ ವಿರುದ್ಧ ಕ್ರಮ ಕೈಗೊಂಡು ಸಮಸ್ಯೆ ಪರಿಹರಿಸಲು ಸರ್ಕಾರ ಪ್ರಯತ್ನಿಸುವುದೆ? | |

| | | |
|---|---|---|
| | | ಖಾನ್ 'ಇವರ ಹೆಸರಿಗೆ ಯಾವುದೇ ಜಮೀನು ಇರುವುದಿಲ್ಲವೆಂದು ಸರ್ವೇಯರ್‌ರವರು ತಿಳಿಸಿರುತ್ತಾರೆ.<br><br>ತದನಂತರದಲ್ಲಿ, ಗುಲಬರ್ಗಾ ವಿಶ್ವವಿದ್ಯಾಲಯವು ಸದರಿ ಜಮೀನಿನ ಸುತ್ತ ಕಾಂಪೌಂಡು ಗೋಡೆ ನಿರ್ಮಾಣಕ್ಕಾಗಿ ಟೆಂಡರ್ ಕರೆದು ಗುತ್ತಿಗೆದಾರರಿಗೆ ಕಾಮಗಾರಿ ಪ್ರಾರಂಭಿಸಲು ಆದೇಶ ನೀಡಿರುತ್ತದೆ. ಆದಾಗ್ಯೂ ಶ್ರೀ ಯೂಸುಫ್ ಖಾನ್ ತಂದೆ ಜಾನ್ ಮೊಹಮದ ಖಾನ್ ಮಳಖೇಡ ಇವರು ಈ ಕಾಮಗಾರಿಗೆ ಅಡ್ಡಿಪಡಿಸುತ್ತಿದ್ದ ಕಾರಣ ದಿನಾಂಕ: 17.05.2014 ಮತ್ತು 25.05.2014ರಂದು ಆರಕ್ಷಕ ಉಪ ನಿರೀಕ್ಷಕರು, ಮಳಖೇಡ ಹಾಗೂ ಸಹಾಯಕ ಆಯುಕ್ತರು, ಸೇಡಂ ಇವರಿಗೆ ದೂರು ದಾಖಲಿಸಿ ಕಾಮಗಾರಿಯನ್ನು ಪ್ರಾರಂಭಿಸಲು ಹಾಗೂ ಕಾಮಗಾರಿ ಪೂರ್ಣಗೊಳ್ಳುವವರೆಗೆ ಸೂಕ್ತ ಪೋಲೀಸ್ ರಕ್ಷಣೆ ನೀಡಬೇಕೆಂದು ಕುಲಸಚಿವರು, ಗುಲಬರ್ಗಾ ವಿಶ್ವವಿದ್ಯಾಲಯ ಇವರು ದೂರು ದಾಖಲಿಸಿರುತ್ತಾರೆ.<br><br>ಈ ಪ್ರಕ್ರಿಯೆಯು 2012 ರಿಂದ 2014ರವರೆಗೆ ನಡೆದಿದ್ದು, ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ ಈ ಯೋಜನೆಗೆ ಯು.ಜಿ.ಸಿ.ಯಿಂದ ಅವಶ್ಯ ಅನುದಾನ ಪಡೆಯಲು ಹಿನ್ನಡೆಯಾದ್ದರಿಂದ, ಗುಲ್ಬರ್ಗಾ ವಿಶ್ವವಿದ್ಯಾಲಯವು ಈ ಯೋಜನೆಯನ್ನು ಪೂರ್ಣಗೊಳಿಸಿರುವುದಿಲ್ಲ. |

ಸಂಖ್ಯೆ: ಇಡಿ 150 ಯುಜಿವಿ 2025

(ಡಾ: ಎಂ.ಸಿ. ಸುಧಾಕರ್)
ಉನ್ನತ ಶಿಕ್ಷಣ ಸಚಿವರು